


### ಮೀನುಗಳೇ ವಿಠಲನ ಓಲೆ!

ಪಂಡರಪುರದಲ್ಲಿ ನೆಲೆ ನಿಂತಿರುವ ವಿಠಲನ ಮೂರ್ತಿಯ ಎರಡು ಕಿವಿಗಳಲ್ಲಿ ಮೀನಿನ ಆಕಾರದ ಓಲೆಗಳು ಗಮನ ಸೆಳೆಯುತ್ತವೆ. ಇದಕ್ಕೆ ತನ್ನದೇ ಆದ ಪುರಾಣ ಕಥೆ ಇದೆ.

ಪಾಂಡುರಂಗನ ಅಪ್ಪಟ ಭಕ್ತನಾಗಿದ್ದ ಮೀನುಗಾರನೊಬ್ಬ ಒಮ್ಮೆ ವಿಠಲನ ದರ್ಶನಕ್ಕೆ ಬರುವಾಗ ಕೊಡಲು ಏನೂ ಇರುವುದಿಲ್ಲ. ಆಗ ತಾನು ಹಿಡಿದು ತಂದ ಚಿನ್ನದ ವರ್ಣದ ಎರಡು ಮೀನುಗಳನ್ನೇ ದೇವರಿಗೆ ಕಾಣಿಕೆಯಾಗಿ ನೀಡಲು ತರುತ್ತಾನೆ. ಆದರೆ, ಅದಕ್ಕೆ ದೇವಾಲಯದಲ್ಲಿ ತೀವ್ರ ವಿರೋಧ ವ್ಯಕ್ತವಾಗುತ್ತದೆ. ಮೀನುಗಾರನನ್ನು ದೇವಸ್ಥಾನದ ಒಳಗೆ ಬಿಡದೇ ಹೊರಗಟ್ಟುತ್ತಾರೆ. ಇದರಿಂದ ನೊಂದ ಬಡ ಮೀನುಗಾರ ಪಾಂಡುರಂಗನ ದರ್ಶನ ಮಾಡಲಾಗದೇ ದೇವಸ್ಥಾನದ ಹೊರಭಾಗದಲ್ಲೇ ನಿಂತು ಭಕ್ತಿಯಿಂದ ಬೇಡಿಕೊಳ್ಳುತ್ತಾನೆ. ಆಗ ಮೀನುಗಾರನ ಭಕ್ತಿಗೆ ಒಲಿದ ವಿಠಲ ಗುಡಿಯಿಂದ ಹೊರಬಂದು ಮೀನುಗಾರ ನೀಡುವ ಆ ಎರಡು ಮೀನುಗಳನ್ನೇ ಸ್ವೀಕರಿಸಿ, ಓಲೆಯಾಗಿ ಧರಿಸುತ್ತಾನೆ ಎಂಬ ಪುರಾಣ ಕಥೆ ಜನಜನಿತವಾಗಿದೆ.

ತಮ್ಮ ಊರುಗಳಿಂದ ತಂಡೋಪತಂಡವಾಗಿ ನೂರಾರು ಕಿ.ಮೀ. ದೂರದಿಂದ ವಾದ್ಯ, ಮೇಳ, ಹಾಡಿನೊಂದಿಗೆ ಪಾದಯಾತ್ರೆ ಮೂಲಕ ಆಗಮಿಸುವುದು ವಿಶೇಷ.

ತಾಳ ಹಾಕುತ್ತಾ, ತಂಬೂರಿ ಬಾರಿಸುತ್ತಾ, ವೀಣೆ, ಮೃದಂಗವನ್ನು ನುಡಿಸುತ್ತಾ, ಅಭಂಗಗಳ ಮೂಲಕ ವಿಠಲನ ಭಜಿಸುತ್ತಾ, ಹಣೆಯ ಮೇಲೆ ಅಷ್ಟಗಂಧ, ಕೈಯಲ್ಲಿ ವಿಠಲನ ಧ್ವಜ, ತಲೆಯ ಮೇಲೆ ತುಳಸಿ ಹೊತ್ತು ಪಂಢರಪುರಕ್ಕೆ ಪಾದಯಾತ್ರೆ ಮೂಲಕ ಬರುವ ಶ್ವೇತ ವಸ್ತ್ರಧಾರಿ ಯಾತ್ರಿಕರ ದಂಡನ್ನು ನೋಡುವುದೇ ಕಣ್ಣಿಗೆ ಹಬ್ಬ.

ತುಳಸಿ ಮಾಲೆ ಧರಿಸಿದ ಸಂತರು, ತಲೆಯ ಮೇಲೆ ತುಳಸಿಕಟ್ಟೆ ಹೊತ್ತು, ಹೆಜ್ಜೆ ಹಾಕುತ್ತಾ ಕೈಕೈ ಹಿಡಿದುಕೊಂಡು ಕುಣಿದು ಸಂಭ್ರಮಿಸಿ, ಪಂಢರಿನಾಥನಿಗೆ ಜೈಕಾರ ಹಾಕುವುದು ಭಕ್ತರಲ್ಲಿ ಉನ್ಮಾದವನ್ನೇ ಸೃಷ್ಟಿಸುತ್ತದೆ.

ಪಂಢರಪುರಕ್ಕೆ ಬರುವ ರಸ್ತೆ, ಹೆದ್ದಾರಿಗಳಲ್ಲಿ ಪ್ರವಾಹದೋಪಾದಿಯಲ್ಲಿ ಬರುವ ಪಾದಯಾತ್ರಿಕರಿಗೆ ವಿಠಲನ ಭಕ್ತರು, ದಾನಿಗಳು ಬಗೆಬಗೆಯ ಭಕ್ಷ್ಯಗಳನ್ನು ತಾವೇ ತಯಾರಿಸಿ ಪ್ರಸಾದವನ್ನು ಉಚಿತವಾಗಿ ನೀಡುವ ಮೂಲಕ ಯಾತ್ರಿಕರಿಗೆ ಹಸಿವು, ನೀರಡಿಕೆಯಾಗದಂತೆ ನೋಡಿಕೊಳ್ಳುತ್ತಾರೆ. ಅಲ್ಲದೆ, ರಾತ್ರಿ ವಾಸ್ತವ್ಯಕ್ಕೂ ವ್ಯವಸ್ಥೆ ಮಾಡುತ್ತಾರೆ.

ನೂರಾರು ಕಿ.ಮೀ. ದೂರವನ್ನು ಬರಿಗಾಲಲ್ಲೇ ನಡೆದು ಸಾಗುವ ಭಕ್ತರ ಸಾಹಸ ಅಚ್ಚರಿ ಮೂಡಿಸುವಂತಹದು. ಹೆಣ್ಣು, ಗಂಡು, ಹಿರಿಯ, ಕಿರಿಯ, ಬಡವ, ಶ್ರೀಮಂತ ಎಂಬ ಬೇಧಭಾವವಿಲ್ಲದೇ ಊರಿಗೆ ಊರೇ ಒಂದಾಗಿ ವಿಠಲನ ದರ್ಶನಕ್ಕೆ ತೆರಳುವುದು ಪರಂಪರಾಗತ ರೂಢಿಯಾಗಿದೆ.

ಸುಖ, ಶಾಂತಿ, ನೆಮ್ಮದಿ, ಆರೋಗ್ಯ, ಆಯುಷ್ಯ, ಸಿರಿತನ ಬಯಸಿ, ಹರಕೆ ಹೊತ್ತ ಭಕ್ತರು ವಿಠಲ–ರುಕ್ಮಿಣಿಯ ಸನ್ನಿಧಿಗೆ ಹತ್ತಾರು ವರ್ಷಗಳಿಂದ ಬಿಡದೇ ತೆರಳುವುದು ವಿಶೇಷ. ಆಧುನಿಕತೆಯ ಭರಾಟೆ ನಡುವೆಯೂ ವಿಠಲನ ಬಳಿಗೆ ನಡೆದು ಹೋಗುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆಯೇ ಹೊರತು, ಕಡಿಮೆಯಾಗಿಲ್ಲ!